ಖಂಡ 2 ರಿಂದ 5ರವರೆಗೆ.

ಛೇರ್ಮನ್:-"ಖಂಡ 2 ರಿಂದ 5ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2ರಿಂದ 5ರವರೆಗೆ ಎರಡೂ ಸೆರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ.

ಛೇರ್ಮನ್:- ಪ್ರಸ್ತಾವ ಏನೆಂದರೆ, "ಮೊದಲನೇ ಖಂಡ, ದೀರ್ಘ್ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೇ ಖಂಡ, ದೀರ್ಘ್ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ.

ಶ್ರಿ ಎಸ್.ಬಂಗಾರಪ್ಪ:- (ಮುಖ್ಯಮಂತ್ರಿಯವರು):- 1992ರ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಛೇರ್ಮನ್:- ಪ್ರಸ್ತಾವ ಏನೆಂದರೆ, " 1992ರ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

1992ರ ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ.

ಪರ್ಯಾಲೋಚನಾ ಪ್ರಸ್ತಾವ

ಶ್ರಿ ಬ್ಲೇಸಿಯಸ್.ಎಂ.ಡಿಸೌಜ : (ಕಾನೂನು ಸಚಿವರು):- ಮಾನ್ಯ ಅಧ್ಯಕ್ಷರೇ, 1992ರ ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಬ್ಲೇಸಿಯಸ್.ಎಂ.ಡಿಸೌಜ :- (ಕಾನೂನು ಸಚಿವರು):- ಮಾನ್ಯ ಅಧ್ಯಕ್ಷರೇ, ಈ ಮಸೂದೆಯಲ್ಲಿ ಎರಡು ತಿದ್ದುಪಡಿಗಳನ್ನು ನಾವು ಏನು ತಂದಿದ್ದೇವೆ ಇದರಲ್ಲಿ ಇದುವರೆಗೂ ನಮ್ಮ ಮಂತ್ರಿಗಳಿಗೆ, ಸ್ಪೀಕರ್, ಡೆಪ್ಯುಟಿ ಸ್ಪೀಕರ್, ಛೇರ್ಮನ್, ಡೆಪ್ಯುಟಿ ಛೇರ್ಮನ್ ಹಾಗೂ ಶಾಸಕರುಗಳಿಗೆ 10 ಸಾವಿರ ರೂಪಾಯಿಗಳವರೆಗೂ ಟ್ರೈನ್ ಮತ್ತು ಏರ್ ಟಿಕೆಟ್ಸ್ ಅನ್ನು ನಮ್ಮ ಅಕೌಂಟ್ಸ್ ಕಛೇರಿಯಲ್ಲಿ ಕೊಡುತ್ತಿದ್ದರು. ಅವರು 10 ಸಾವಿರ ರೂಪಾಯಿಗಳವರೆಗೂ ಭರ್ತಿಮಾಡಿ ಕೊಡುತ್ತಿದ್ದರು. ಇದರಲ್ಲಿ ನಮ್ಮ ಸದಸ್ಯರಿಗೆ ಬಹಳಷ್ಟು ಕಷ್ಟವಾಗುತ್ತಿತ್ತು. ಕೆಲವು ಕಡೆ ಟಿಕೆಟ್ ಸಿಗದೆ ಇದ್ದ ಕಾರಣ, ಅದಕ್ಕೆ ನಾವು ಈ ಸಲ 10 ಸಾವಿರ ರೂಪಾಯಿಗಳನ್ನು ಕ್ಯಾಶ್ ಮುಖಾಂತರ ಕೊಡುವ ಒಂದು ತಿದ್ದುಪಡಿ ತಂದಿದ್ದೇವೆ. ಏಪ್ರಿಲ್ ತಿಂಗಳಲ್ಲಿ 5 ಸಾವಿರ ರೂಪಾಯಿ, ಅಕ್ಟೋಬರ್ ತಿಂಗಳಲ್ಲಿ 5 ಸಾವಿರ ರೂಪಾಯಿ ಕ್ಯಾಶ್ ಕೊಡಬೇಕೆನ್ನುವುದು ಒಂದು. ನಮ್ಮ ಶಾಸಕರುಗಳು ಏನು ನಿವೃತ್ತಿಯಾಗಿದ್ದಾರೆ ಅವರಲ್ಲಿ ಕೆಲವರು ಬಹಳ ಕಷ್ಟದಲ್ಲಿ ಇರುತ್ತಾರೆ. ನಿಮಗೆ ಗೊತ್ತಿರಬಹುದು, ಎರಡು ವರ್ಷಗಳ ಹಿಂದೆ ನಮ್ಮ ಮಾನ್ಯ ಶಾಸಕರೊಬ್ಬರು ನಿಧನರಾದಾಗ

ಅವರ ಶವವನ್ನು ಅವರ ಊರಿಗೆ ತೆಗೆದುಕೊಂಡು ಹೋಗಲಿಕ್ಕೆ ಕಷ್ಟವಾಯಿತು. ಅದಕ್ಕೋಸ್ಕರ ಒಂದು ಬೆನವಲೆಂಟ್ ಫಂಡ್ ಮಾಡಬೇಕೆಂದು ನಾವು ತಿದ್ದುಪಡಿ ತಂದಿದ್ದೇವೆ. ಇವೆರಡನ್ನೂ ಅಂಗೀಕರಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

+ ಪ್ರೊ. ಎಂ.ಡಿ.ನಂಜುಂಡಸ್ವಾಮಿ: (ಧಾರವಾಡ ಗ್ರಾಮಾಂತರ):- ಮಾನ್ಯ ಅಧ್ಯಕ್ಷರೇ, ಬೆನವಲೆಂಟ್‌ಫಂಡ್ ಬಗ್ಗೆ ನಾನು ಮಾತನಾಡುವುದಿಲ್ಲ. ಆದರೆ ಈ 10 ಸಾವಿರ ರೂಪಾಯಿ ಕ್ಯಾಶ್ ವರ್ಷಕ್ಕೆ ಕೊಡುವುದು ಏನಿದೆ ಅದಕ್ಕೆ ಸಂಬಂಧಪಟ್ಟ ಹಾಗೆ ಈ ಮಸೂದೆ ಅತ್ಯಂತ ಅಸಭ್ಯವಾದ ಮಸೂದೆ ಎಂದು ನಾನು ಕರೆಯಬೇಕಾಗಿದೆ. ನಮ್ಮ ವೇತನ ಇತ್ಯಾದಿಗಳ ಬಗ್ಗೆ ನಾವು ಕಳೆದ ವರ್ಷ ಅಸಭ್ಯವಾಗಿ ವರ್ತನೆ ಮಾಡಿದ್ದೇವೆ. ಕಳೆದ ಅಧಿವೇಶನದಲ್ಲಿ ನಮ್ಮ ವೇತನಗಳನ್ನು ಹೆಚ್ಚು ಮಾಡಿಕೊಳ್ಳುವಂತಹ ಸಂದರ್ಭದಲ್ಲಿ ನಾನು ಹಾಜರಿರಲಿಲ್ಲ, ಆದ್ದರಿಂದ ಈ ಮಾತನ್ನು ಹೇಳುವುದಕ್ಕಾಗಲಿಲ್ಲ. ಈ ಮಸೂದೆಯಲ್ಲಿ ಏನು ನಾವು ಎರಡು ಕಂತಿನಲ್ಲಿ ಐದೈದು ಸಾವಿರ ರೂಪಾಯಿಗಳನ್ನು ಕೊಡುವಂಥ ಪ್ರಯತ್ನ ಮಾಡುತ್ತಿದ್ದೇವೆ. ಇದು, ಒಬ್ಬ ಸದಸ್ಯರು ಪ್ರಯಾಣ ಮಾಡಿದರೂ ಪಾವತಿಯಾಗುತ್ತದೆ, ಪ್ರಯಾಣ ಮಾಡದೇ ಇದ್ದರೂ ಪಾವತಿಯಾಗುತ್ತದೆ. ಈಗ ಹಾಲಿ ಇದ್ದಂಥ ವ್ಯವಸ್ಥೆಯಲ್ಲಿ ಏನು ದೋಷ ಇತ್ತೆಂದು ನನಗಂತೂ ಗೊತ್ತಾಗುತ್ತಿಲ್ಲ. ನಾವು ಹಣ ಪಾವತಿ ಮಾಡಿ ಟಿಕೇಟ್ ಪಡೆದು ನಂತರ ವಾಪಸ್ ಪಡೆಯುತ್ತಿದ್ದೆವು. ಆದರಿಂದ ಏನು ತೊಂದರೆ ಇತ್ತು ಎಂದು ನನಗಂತೂ ಗೊತ್ತಾಗುತ್ತಿಲ್ಲ. ಮತ್ತೆ ಇನ್ನೂ ಒಂದು ಅಸಭ್ಯವಾದ ಅಂಶ ಈ ಮಸೂದೆಯಲ್ಲಿ ಇರುವುದು ಏನೆಂದರೆ, 10 ಸಾವಿರ ರೂಪಾಯಿ ನಗದು ಕೊಡುವಂಥ ಏನು ಸರ್ಕಾರ ಮನಸ್ಸು ಮಾಡಿದೆ, ಅದು ನವಂಬರ್ 90 ರಿಂದ ಜಾರಿಗೆ ಬರುತ್ತದೆ. ನವಂಬರ್ 90 ರಿಂದ ನಾನು ಪ್ರಯಾಣ ಮಾಡಿದ್ದೆನೋ ಇಲ್ಲವೋ ನನಗೂ ಪಾವತಿಯಾಗುತ್ತದೆ. ಇಂಥ ಅಸಭ್ಯವಾದ ತಿದ್ದುಪಡಿಯನ್ನು ದಯವಿಟ್ಟು ಈ ಸರ್ಕಾರ ವಾಪಸ್ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ನಾವು ಹೊರಗಡೆ ಇರುವ ಜನಗಳಿಗೆ ನಗೆಪಾಟಲಿಗೆ ವಸ್ತುಗಳಾಗುತ್ತೇವೆ. ಮಾನ್ಯ ಸಭಾಧ್ಯಕ್ಷರೆ, ಹೋದ ವರ್ಷ ನಾನು ಮಾಡಬೇಕೆಂದಿದ್ದ ಸಲಹೆಯನ್ನು ಈಗ ಮಾಡುತ್ತೇನೆ. ನಾವು ಏನು4500 ರೂಪಾಯಿ ವೇತನ ಹೆಚ್ಚು ಮಾಡಿಕೊಂಡಿದ್ದೇವೆ, ಅದು ಬಹಳ ದೊಡ್ಡ ದುಡ್ಡು ಅಲ್ಲದೇ ಇರಬಹುದು. ಆದರೂ ನಾವು ನಮ್ಮನ್ನು ಅಯ್ಕೆ ಮಾಡಿ ಕಳುಹಿಸಿದಂಥವರಿಗಿಂತಾ ಹೆಚ್ಚು ಸೌಲಭ್ಯ ಇರುವಂಥ ಜನ ಎಂದು ನಾವೇ ಪರಿಗಣಿಸಿಕೊಳ್ಳಬಾರದು. ಆ ಕಾರಣ ನಾನು ಮಾಡುವಂಥ ಸಲಹೆ ಏನೆಂದರೆ, ಈ ತಿದ್ದುಪಡಿಯನ್ನು ನೀವು ವಾಪಸ್ ತೆಗೆದುಕೊಳ್ಳಬೇಕು, ಇದು ಮೊದಲನೆಯದು. ಎರಡನೆಯದು, ಈ ಸಂದರ್ಭದಲ್ಲಿ ಶಾಸಕರುಗಳಿಗೆ, ಮಂತ್ರಿಗಳಿಗೆ ಇತ್ಯಾದಿ ಬೇರೆಯವರಿಗೆ, ಈ ಸದನಕ್ಕೆ ಸಂಬಂಧಪಟ್ಟವರಿಗೆ ಏನು ನಾವು ಹಣಗಳನ್ನು ಪಾವತಿ ಮಾಡುತ್ತೇವೆ. ಆ ಇನ್‌ಕಂ ಟ್ಯಾಕ್ಸ್‌ನ ಚೌಕಟ್ಟಿನೊಳಗೆ ಬರುವಂಥ ವ್ಯವಸ್ಥೆ ಮಾಡಿದರೆ ನಮ್ಮ ಮರ್ಯಾದೆಯನ್ನು ನಮ್ಮ ಹೊರಗಿನ ಮತದಾರರು ಏನಿದ್ದಾರೆ ಅವರೆದುರಿಗೆ ಕಾಪಾಡಿಕೊಳ್ಳಬಹುದೆಂದು ನನ್ನ ಅಭಿಪ್ರಾಯ. ಈ ಮಸೂದೆಯಂತೂ ಈ ಸದನದಲ್ಲಿ ಮಂಡಿಸಲಾಗಿರುವಂಥ ಅತ್ಯಂಥ ಅಸಭ್ಯವಾದ ಮಸೂದೆ. ಇದನ್ನು ವಾಪಸ್ ತೆಗೆದುಕೊಳ್ಳಬೇಕೆಂದು ನಾನು ಕೇಳುತ್ತೇನೆ.

+ ಶ್ರೀ ಡಿ.ಬಿ. ಚಂದ್ರೇಗೌಡ: (ತೀರ್ಥಹಳ್ಳಿ):-ಮಾನ್ಯ ಅಧ್ಯಕ್ಷರೇ, ಬಹಳ ಮುಖ್ಯವಾಗಿ ಈ ಬೆನೊವಲೆವೆಂಟ್ ಫಂಡನ್ನು ಇಲ್ಲಿ ಏನು ಹೇಳಿದ್ದಾರೆ, ಇದನ್ನು ನಾನು ತುಂಬು ಹೃದಯದಿಂದ ಸ್ವಾಗತಿಸುತ್ತೇನೆ. ಮಾನ್ಯ ಮಂತ್ರಿಗಳು ಹೇಳಿದಂಥ ಹನುಂತಪ್ಪನವರು ವಿರೋಧ ಪಕ್ಷದ ಶಾಸಕರಾಗಿ ತೀರಿಕೊಂಡರು. ಇವತ್ತಿಗೂ ಪಾಪ ಅವರ ಮನೆಯವರು ಏನಾದರೂ ಅರ್ಜಿ

ಕೊಡುವುದಕ್ಕೆ ಬೆಂಗಳೂರಿಗೆ ಬರುವಂಥ ಸ್ಥಿತಿ ಇಲ್ಲ. ನಾನು ಅದಕ್ಕಾಗಿ ಲೆಜಿಸ್ಲೇಚರ್ ಸೆಕ್ರೆಟರಿಯೇಟ್‌ಗೂ ಅನೇಕ ಸಾರಿ ಬರೆದಿದ್ದೆ. ಮಾನ್ಯ ಸಭಾಧ್ಯಕ್ಷರು ತುಂಬಾ ವಿಶ್ವಾಸದಿಂದ ಬೇರೆ ಯಾವುದೋ ಒಂದು ರೂಪದಲ್ಲಿ 10 ಸಹಸ್ರ ರೂಪಾಯಿಗಳನ್ನು ಕೊಟ್ಟರು. ಆದರೆ ಈಗ ಕನಿಷ್ಟ ಅವರ ಯಜಮಾನರ ಅವಧಿಯವರೆಗಾದರೂ ಅವರಿಗೆ ಒಂದಿಷ್ಟು ಅನುಕೂಲ ಬರುತ್ತದೆಂದು ನಾನು ಅಂದುಕೊಂಡಿದ್ದೆ. ಈಗ ಅದರ ವ್ಯವಸ್ಥೆಯೂ ಇರಲಿಲ್ಲ. ಅದಕ್ಕಾಗಿ ನಾನೇ ಇದನ್ನು ಪ್ರಸ್ತಾಪ ಮಾಡಿದ್ದೆ. ಆದ್ದರಿಂದ ಸ್ವಾಗತ ಮಾಡುತ್ತೇನೆ ಮತ್ತು ಇನ್ನೊಂದು ಭಾಗವನ್ನು ಶ್ರೀಮಾನ್ ನಂಜುಂಡಸ್ವಾಮಿಯವರು ಏನು ಪ್ರಸ್ತಾಪ ಮಾಡಿದ್ದಾರೆ, ನನಗೆ ಇದರ ಅಗತ್ಯ ಕಾಣಲಿಲ್ಲ. At least we should appear to be honest. 10 ಸಾವಿರ ರೂಪಾಯಿ ಕೊಡತಕ್ಕಂಥಾದ್ದು ಇದೆಯಲ್ಲ ಒಂದು ಲೆಕ್ಕ ಇಡತಕ್ಕಂಥ ಕ್ರಮ ಬೇಕು. ನಾವು ಶಾಸಕರು ಅಂದ ತಕ್ಷಣವೇ ಲೆಕ್ಕವೂ ಇಲ್ಲ, ಬುಕ್ಕವೂ ಇಲ್ಲ, ಏನುಬೇಕಾದರೂ ಶಾಸನ ಮಾಡಬಹುದು, ಹೇಗೆ ಬೇಕಾದರೂ ಡ್ರಾ ಮಾಡಿಕೊಳ್ಳಬಹುದು ಎನ್ನತಕ್ಕಂಥ ಪ್ರವೃತ್ತಿಯನ್ನು ನಾವು ಈ ಶಾಸನ ಸಭೆಯ ಮೂಲಕ ಹೊರಗಡೆ ಕೊಡತಕ್ಕಂಥದ್ದನ್ನು ನಾನು ಸ್ಪಷ್ಟವಾಗಿ ವಿರೋಧ ಮಾಡುತ್ತೇನೆ. ಈಗ ಇದ್ದಂಥ ವ್ಯವಸ್ಥೆ ಏನಿದೆಯೆಂದರೆ, ಒಂದು ವೇಳೆ ವಿಮಾನದಲ್ಲೋ, ರೈಲಿನಲ್ಲೋ ಪ್ರಯಾಣ ಮಾಡಿದರೆ 10 ಸಾವಿರ ರೂಪಾಯಿಗಳವರೆಗೆ ರೀ-ಎಂಬರ್ಸ್‌ಮೆಂಟ್ ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ. ಆದರೆ ಈ ಮಸೂದೆಯಲ್ಲಿ ನಾವು ಪ್ರಯಾಣ ಮಾಡಲಿ ಮಾಡದೇ ಇರಲಿ 10 ಸಾವಿರ ರೂಪಾಯಿಗಳನ್ನು ತೆಗೆದುಕೊಳುತ್ತೇವೆಂದು ಹೇಳಿದರೆ ಅದು ಅಷ್ಟಾಗಿ ಚೆನ್ನಾಗಿ ಕಾಣುವುದಿಲ್ಲ. ಆದ್ದರಿಂದ ಈ ಮಸೂದೆ ನಿಜವಾಗಿಯೂ ನಮ್ಮ ಶಾಸಕಾಂಗದ ವ್ಯವಸ್ಥೆಯಲ್ಲಿ ಶಾಸನವನ್ನು ಮಾಡತಕ್ಕಂಥ ನಮ್ಮ ಅಧಿಕಾರ ಏನಿದೆ, ಆ ಒಂದು ವ್ಯಾಪ್ತಿಯ ದುರುಪಯೋಗವಾಗುತ್ತದೆ ಎಂದು ನಾನು ಹೇಳಬಯಸುತ್ತೇನೆ.

ಶ್ರೀ ಬಿ.ಹೆಚ್.ಬನ್ನಿಕೋಡ್:- ಒಮ್ಮತದ ಬೆಂಬಲ ಬರಲಿ ಎಂದು ಈ ರೀತಿ ಏನಾದರೂ ಹತ್ತು ಸಾವಿರ ರೂಪಾಯಿಗಳನ್ನು ಕೊಡುವಂಥ ವ್ಯವಸ್ಥೆ ಕಾನೂನು ಬದ್ಧವಾಗಿ ನಡೆದಿದೆಯೇ ?

ಶ್ರೀ ಡಿ.ಬಿ.ಚಂದ್ರೇಗೌಡ:- ಆದ್ದರಿಂದ ದಯಮಾಡಿ ಇದರ ಬಗ್ಗೆ ಆಲೋಚನೆ ಮಾಡಿ. ಮಾನ್ಯ ಪ್ರೊ: ನಂಜುಂಡಸ್ವಾಮಿಯವರು ಏನು ಹೇಳಿದ್ದಾರೆ, ಅದರಂತೆ ಸಾರ್ವಜನಿಕ ದೃಷ್ಟಿಯಿಂದ ನಾವು ಶಾಸನಗಳನ್ನು ಮಾಡತಕ್ಕಂಥವರು ಆ ವ್ಯಾಪ್ತಿಯೊಳಗೆ ಕೆಲಸ ಮಾಡುತ್ತಿದ್ದೇವೆ ಎಂಬ ಅಭಿಪ್ರಾಯ ಮೂಡಿಸುವುದಕ್ಕೆ ಇದು ಸಹಕಾರಿಯಾಗಿಲ್ಲ ಎಂಬ ಮಾತನ್ನು ಹೇಳುತ್ತೇನೆ.

+ ಡಾ:ಎನ್.ಬಿ.ನಂಜಪ್ಪ: (ಶ್ರವಣಬೆಳಗೊಳ):- ಮಾನ್ಯ ಅಧ್ಯಕ್ಷರೇ, ಬೆನವಲೆಂಟ್ ಫಂಡ್ ಮಾಡಬೇಕೆಂಬುದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಸ್ವಾಗತ ಮಾಡಿದ್ದಾರೆ, ನಾನು ಕೂಡ ಅದನ್ನು ಸ್ವಾಗತ ಮಾಡುತ್ತೇನೆ. ವರ್ಷಕ್ಕೆ 10 ಸಾವಿರ ರೂಪಾಯಿಗಳ ಟ್ರಾವಲಿಂಗ್ ಅಲೋಯನ್ಸಸ್ ಏನು ಇದೆ, ಇದರಲ್ಲಿ ನಾನು ಎರಡು ವರ್ಷಗಳಲ್ಲಿ ಕಂಡ ಹಾಗೆ ಬಹಳಷ್ಟು ಜನ ಮೊದಲು ಅವರು ಪ್ರಯಾಣ ಮಾಡಿ ಆ ಮೇಲೆ ಆ ಟಿಕೆಟ್‌ಗಳನ್ನು ತೆಗೆದುಕೊಂಡು ಬಂದು ಪ್ರೊಡ್ಯೂಸ್ ಎಲ್ಲಾ ಮಾಡುವುದರಲ್ಲಿ ಕಷ್ಟ ಇದೆ ಎಂಬ ನಿಜಾಂಶ ಕಂಡುಬಂದಿದೆ. ಎರಡನೇಯದಾಗಿ, ಎಷ್ಟೋ ಸಾರಿ ಬೇರೆಯವರ ಹೆಸರನ್ನು ಬರೆಸಿ ಅವರ ಹೆಸರಿನಲ್ಲಿ ಟಿಕೆಟ್‌ಗಳನ್ನು ತರಿಸಿ ಡೆಲ್ಲಿಗೆ ಹೋಗದೇನೇ ಮಾಡಿರುವುದು ಕೂಡ ಇದೆ. ಹತ್ತು ಸಾವಿರ ರೂಪಾಯಿಗಳನ್ನು ಡ್ರಾ ಮಾಡುವುದನ್ನು ಹೇಗಾದರೂ ಅವರು ಡ್ರಾ ಮಾಡಿಯೇ ಮಾಡುತ್ತಾರೆ. ನಮಗೆ ಬ್ರಿಟೀಷರ ಕಾಲದಿಂದಲೂ ಈ ರೆಡ್‌ಟೇಪಿಸಂ, ಪ್ರೊಸೀಜರಲ್ ಪ್ರಾಬ್ಲಮ್ಸ್ ಇತ್ಯಾದಿಗಳಿಗೆ ಸ್ಟಿಕ್ ಆನ್ ಆಗಿ ಸಿಂಪ್ಲಿಫೈ

ಮಾಡುವುದರಿಂದ ಏನಾಗಿದೆ ? ತಪ್ಪೇನಾಗಿದೆ ? ಅದಕ್ಕೆ ಪ್ರೊ: ನಂಜುಂಡಸ್ವಾಮಿಯವರು ದೊಡ್ಡ ಗಾತ್ರ ಮತ್ತು ದಪ್ಪದ ಪದಗಳ ಪ್ರಯೋಗವನ್ನು ಮಾಡಿದ್ದಾರೆ. ಹೀಗೆ ಯಾರೂ ಪ್ರಯಾಣ ಮಾಡದೇನೇ ಇರುವುದೇ ಇಲ್ಲ. If you go to Delhi once it will be finished; if you go some where with your wife it will be finished. ಯಾವಾಗಲೂ ಒಂದು ಹತ್ತು ಸಾರಿ ಆಫೀಸ್‌ಗೆ ಹೋಗುವುದು, ಬರೆದು ಕೊಡುವುದು ಇತ್ಯಾದಿ ಮಾಡುತ್ತಿರತಕ್ಕಂಥಾದ್ದು ಸರಿಯೇ? For that Rs. 10,000 one way or the other account has to be produced. ಅದಕ್ಕೆ ಅಷ್ಟು ದೊಡ್ಡ, ದಪ್ಪ ಪದವನ್ನು ಏನೂ ಉಪಯೋಗಿಸ ಬೇಕಾಗಿಲ್ಲ. ಅಸಭ್ಯಬಿಲ್ಲನ್ನು ನೀವು ತಂದಿದ್ದೀರಿ, ಅಸಭ್ಯ ವರ್ತನೆ ಎಂದು ಹೇಳಬೇಕಾಗಿಲ್ಲ. ಇದೆಲ್ಲವನ್ನೂ ನಾವು ಜನರನ್ನು ಮೆಚ್ಚಿಸುವುದಕ್ಕೆ ಹೇಳಬಹುದೇ ಹೊರತು, ನಿಜಾಂಶವನ್ನು ಪರೀಕ್ಷೆ ಮಾಡುತ್ತಾ ಹೋದರೆ, ಸತ್ಯವನ್ನು ಮಾತನಾಡಿ, ಇದನ್ನೆಲ್ಲಾ ಸಿಂಪ್ಲಿಫೈ ಮಾಡಿ ಜೀವನ ನಡೆಸುವುದು ಒಳ್ಳೆಯದೆಂದು ನನಗಾದರೂ ಅನ್ನಿಸುತ್ತದೆ. ಅವರು ಬಿಲ್‌ನಲ್ಲಿ 90ನೇ ಇಸವಿಯಿಂದ ಇದನ್ನು ರೀ ಅಂಬರ್ಸ್ ಮಾಡಬೇಕೆಂದು ಹೇಳಿದರೂ, some problems is there. ಈಗ 1992 ಆಗಿದೆ, ಹಿಂದೆ ಉಳಿದಿರತಕ್ಕಂಥ ಲ್ಯಾಪ್ಸ್ ಆಗಿರುವುದನ್ನೂ ಕೂಡ ರೀಅಂಬರ್ಸ್ ಮಾಡುವುದಕ್ಕೆ ಮಾಡಿದ್ದಾರೆ ಎಂದು ಮಾನ್ಯ ನಂಜುಂಡಸ್ವಾಮಿಯವರು ಏನು ಹೇಳಿದ್ದಾರೋ ಅದರಲ್ಲಿ ಸ್ವಲ್ಪ ಸತ್ಯ ಇದೆ. ಅದನ್ನು ನಾವು ಒಪ್ಪಿಕೊಳ್ಳ ಬಹುದು.

Prof. M.D.NANJUNDASWAMY:- I want to ask it in English. Is it decent? What is the translation of decency? ಕನ್ನಡದಲ್ಲಿ ಹೇಳಿದರೆ ನಿಮಗೆ ನೋವು ಆಗುತ್ತದೆ, ಅದನ್ನೇ ಇಂಗ್ಲೀಷಿನಲ್ಲಿ ಹೇಳಿದರೆ ಬಹಳ ಅಪ್ಯಾಯಮಾನವಾಗಿರುತ್ತದೆ. Is it decent Dr.Nanjappa?

Dr.N.B.NANJAPPA:- One way it is indecent I told you. 1990 ರಿಂದ ಏನಾದರೂ ಎರಡು ವರ್ಷದ್ದನ್ನು ರೀಎಂಬರ್ಸ್ ಮಾಡುವುದಾದರೆ there is some problems.

Prof. M.D.NANJUNDASWAMY:- Mr. speaker sir, it is just a problem of decency. Its translation is ಸಭ್ಯತೆ or ಅಸಭ್ಯತೆ.

+ ಶ್ರೀ ಶಿವಾನಂದ ಹೆಚ್.ಕೌಜಲಗಿ: (ಬೈಲಹೊಂಗಲ):- ಮಾನ್ಯ ಅಧ್ಯಕ್ಷರೇ, ಮಾನ್ಯ ಕಾಯಿದೆ ಸಚಿವರು ಈ ಒಂದು ಬಿಲ್ಲನ್ನು ತಂದಿದ್ದಾರೆ, ಅದರ ಬಗ್ಗೆ ಹೇಳುವುದಾದರೆ, ಮೊದಲು ಶಾಸಕರಿಗೆ ಐದು ಸಾವಿರ ರೂಪಾಯಿಗಳೊಳಗೆ ಕೂಪನ್ಸ್ ಕೊಡುತ್ತಾ ಇದ್ದರು. ಅದನ್ನು 10 ಸಾವಿರ ಮಾಡಿದ ನಂತರ ತಾವು ಟ್ರಾವಲಿಂಗ್ ಮಾಡಿದ ನಂಬರ್‌ಗಳನ್ನು ಕೊಡಬೇಕಾಗಿತ್ತು. ಹೀಗೆ ನಂಬರ್‌ಗಳನ್ನು ತಂದುಕೊಡುವುದು ಶಾಸಕರಿಗೆ ಸ್ವಲ್ಪ ತ್ರಾಸ್ ಆಗುತ್ತಾ ಇತ್ತು. ಅದರ ಬದಲು ನಮಗೆ ಕೂಪನ್‌ಗಳನ್ನು ಕೊಟ್ಟರೂ ನಮ್ಮದೇನೂ ತಕರಾರು ಇಲ್ಲ. ಮೊದಲು ಕೂಪನ್ ಕೊಟ್ಟಾಗ ವರ್ಷದಲ್ಲಿ 10 ಸಾವಿರ ರೂಪಾಯಿಗಳವರೆಗೆ ಟ್ರಾವಲ್ ಮಾಡುವ ರಿಸ್ಟ್ರಿಕ್ಷನ್ ಇತ್ತು. ಹೆಚ್ಚಿಗೆ ಮಾಡಿದರೆ ನಾವು ಕೊಡುತ್ತಿದ್ದೆವು, ಉಳಿದರೆ ಅದು ಲ್ಯಾಪ್ಸ್ ಆಗುತ್ತಿತ್ತು. ಇದರಿಂದ ಕಛೇರಿಯಲ್ಲಿಯೂ ಕೆಲಸ ಚಾಸ್ತಿಯಾಗುತ್ತದೆ. ಯಾರೂ ಕೂಡ ಪ್ರಯಾಣ ಮಾಡದೇ ರೀಎಂಬರ್ಸ್‌ಮೆಂಟ್ ಕೇಳುವುದಿಲ್ಲ. ಹತ್ತು ಸಾವಿರ ರೂಪಾಯಿಗಳಿಗಿಂತ ಹೆಚ್ಚಿಗೆ ಆಗುತ್ತದೆ. ನಾವು ವಿಚಾರ ಮಾಡಬಹುದು. ರೇಟ್ ದಿನದಿಂದ ದಿನಕ್ಕೆ ಏರಲಿಕ್ಕೆ ಹತ್ತಿವೆ. ಬದಲಾಗಿ ಮೊದಲು

10 ಸಾವಿರ ಇದ್ದುದು ಈಗ ಕಡಿಮೆಯಾಗುತ್ತಿದೆ. ಆದಕಾರಣ ಈ ಹಣ ಏನಿದೆ ಅದು ಟ್ರಾವೆಲಿಂಗ್ ಮಾಡುವ ಸಲುವಾಗಿ ಕೊಡುತ್ತಾರೆ. ಆದಕಾರಣ ಅದು ಯೋಗ್ಯವಿದೆ, ಕೊಡಬೇಕು. ಇಲ್ಲದೇಹೋದರೆ ನಮಗೆ ಕೂಪನ್ ಮೊದಲು ಯಾವ ಪ್ರಕಾರ ಕೊಡುತ್ತಿದ್ದರು ಹಾಗೆಯೇ ಕೊಡಬೇಕು.

+ ಶ್ರೀ ಬಿ.ಎಸ್.ಯಡಿಯೂರಪ್ಪ: (ಶಿಕಾರಿಪುರ):- ಮಾನ್ಯ ಅಧ್ಯಕ್ಷರೇ, ವಿಧಾನಮಂಡಲದವರ ವೇತನ, ನಿವೃತ್ತಿವೇತನ ಭತ್ಯೆಗಳ ಬಗ್ಗೆ ವಿಧೇಯಕವನ್ನು ಸಂಬಂಧಪಟ್ಟ ಸಚಿವರು ಮಂಡಿಸಿದ್ದಾರೆ. ಇಲ್ಲಿ ಒಂದು ಕಲ್ಯಾಣ ನಿಧಿ ಸ್ಥಾಪನೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಬಹುಶ: ಈ ಸದನದಲ್ಲಿ ಚರ್ಚೆಯಾಗುವ ಸಂದರ್ಭದಲ್ಲಿ ಯಾರು ವಿಧಾನಸಭೆ ವಿಧಾನ ಪರಿಷತ್‌ಗಳಲ್ಲಿ ಸೇವೆ ಸಲ್ಲಿಸಿದ್ದಾರೆ ಅವರು ನಿಧನರಾದ ಕುಟುಂಬಕ್ಕೆ ಅನುಕೂಲ ಒದಗಿಸುವ ದೃಷ್ಟಿಯಿಂದ ಈ ರೀತಿ ಒಂದು ನಿಧಿ ಆಗತ್ಯವಿದೆ' ಎಂದು ಸಲಹೆಗಳನ್ನು ನಾವೇ ಕೊಟ್ಟಿದ್ದೆವು. ಇದು ಯೋಗ್ಯವಾಗಿದೆ, ಇದನ್ನು ನಾನು ಸ್ವಾಗತಮಾಡುತ್ತೇನೆ. ಎರಡನೆಯದು ಮಾನ್ಯ ನಂಜುಂಡಸ್ವಾಮಿಯವರು ಹೇಳಿದಂತೆ ಒಂದು ರೀತಿ ಚುನಾಯಿತ ಪ್ರತಿನಿಧಿಗಳ ಬಗ್ಗೆ ಅನಗತ್ಯ ಅಪಪ್ರಚಾರಕ್ಕೆ ಅವಕಾಶವಾಗುತ್ತದೆ. ಯಾವುದೇ ಶಾಸಕ ಕೆಲಸ ಮಾಡುವಂತಹವನು ಪ್ರಯಾಣ ಮಾಡುವುದಕ್ಕೆ ಮೊದಲಿದ್ದ ಕೂಪನ್ ಸಿಸ್ಟಮ್ ಚೆನ್ನಾಗಿತ್ತು.

ಶ್ರೀ ಅಜೀಜ್ ಸೇಠ್:- ಕೂಪನ್ ಕೆ.ಎಸ್.ಆರ್.ಟಿ.ಸಿ ಬಸ್ ಇದ್ದರೆ ಆಗುತ್ತದೆ. ಆದರೆ ಪ್ಲೇನು ಟ್ರೈನು, ಔಟ್‌ಸೈಡ್ ಕರ್ನಾಟಕ.

ಶ್ರೀ ಶಿವಾನಂದ. ಹೆಚ್. ಕೌಜಲಗಿ:- ಟ್ರೇನ್ ಪಾಸ್ ಕೊಟ್ಟುಬಿಡಿ, ಅದು ಮಹಾರಾಷ್ಟ್ರ, ಬಿಹಾರಗಳಲ್ಲಿದೆ. ಬೇರೆ ರಾಜ್ಯಗಳಲ್ಲಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ:- ನಾನು ಏನು ಹೇಳುವುದಕ್ಕೆ ಹೊರಟಿದ್ದೆ ಅಂದರೆ, 10 ಸಾವಿರ ರೂಪಾಯಿಗಳು ಖರ್ಚಾದುದನ್ನು ಡ್ರಾ ಮಾಡಲು ನಾನು ವಿರೋಧ ವ್ಯಕ್ತಪಡಿಸುತ್ತಾ ಇಲ್ಲ. ಮೊದಲು ಅನೇಕ ಜನ ಟ್ರೈನ್‌ನಲ್ಲಿ ಪ್ರಯಾಣ ಮಾಡುತ್ತಿರಲಿಲ್ಲ, ಕಡಿಮೆ ಇದ್ದರು. ಆ ತರಹದವರಿಗೆ ಏನು ಮಾಡಬೇಕು ? ಬರೀ ಬಸ್ ಇದೆ, ಒಬ್ಬರಿಗೆ ಆ ಫೆಸಿಲಿಟಿ ಸಿಗುತ್ತದೆ, ಕೆಲವರಿಗೆ ಸಿಗಲಿಲ್ಲ ಎಂಬ ಪ್ರಶ್ನೆ ಬಂತು ಈಗ ನಾನು ಹೇಳುವುದು ಏನೆಂದರೆ ವಿಮಾನ ಅಥವಾ ರೈಲಿನಲ್ಲಿ ಪ್ರಯಾಣ ಮಾಡಿದ ಮೇಲೂ ಸಹ ಆ ಬಿಲ್‌ನ್ನು ಪ್ರೊಡ್ಯೂಸ್ ಮಾಡಿ ಹಣ ಡ್ರಾ ಮಾಡಿಕೊಳ್ಳುವ ಪದ್ಧತಿ ತುಂಬಾ ಒಳ್ಳೆಯದು. ಆದರೆ ಜನರಿಗೆ ತಪ್ಪು ಕಲ್ಪನೆಗೆ ಅವಕಾಶವಾಗುತ್ತದೆ. ಆದ್ದರಿಂದ ನೇರವಾಗಿ10 ಸಾವಿರ ರೂಪಾಯಿಗಳನ್ನು ಐದೈದು ಸಾವಿರ ರೂಪಾಯಿಗಳಂತೆ ಎರಡು ಕಂತುಗಳಲ್ಲಿ ಕ್ಯಾಶ್ ಡ್ರಾ ಮಾಡಿಕೊಳ್ಳಬಹುದು ಎಂದು ಏನು ತಂದಿದ್ದೀರಿ ಇದು ಸರಿಯಾಗಿರಲಿಕ್ಕಿಲ್ಲ. ಅದರ ಬದಲು ಸಂಬಂಧಪಟ್ಟ ಟಿಕೆಟನ್ನು ಪ್ರೊಡ್ಯೂಸ್ ಮಾಡಿ ಡ್ರಾ ಮಾಡಿಕೊಳ್ಳುವುದನ್ನು ಮಾಡಿದರೆ ಅದು ಸರಿಯಾದ ಮಾರ್ಗ ಆಗಬಹುದು ಎನ್ನುವಂಥ ಸಲಹೆಯನ್ನು ನಾನು ಈ ಸಂದರ್ಭದಲ್ಲಿ ಕೊಡುವುದಕ್ಕೆ ಇಚ್ಛೆಪಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು:- ಮಾನ್ಯ ಅಧ್ಯಕ್ಷರೇ, ನಮ್ಮ ಕಾನೂನು ಸಚಿವರು ಏನು ಮಸೂದೆ ತಂದಿದ್ದಾರೆ, ಶಾಸಕರ ಪ್ರಯಾಣ ಭತ್ಯೆ 10 ಸಾವಿರ ರೂಪಾಯಿಗಳು ಏನಿತ್ತು ಅದು ಪ್ಲೇನ್ ಅಥವಾ ರೈಲ್ವೆ ಟಿಕೇಟನ್ನು ಕೂಡಲೇ ಡ್ರಾ ಮಾಡಿಕೊಳ್ಳಬಹುದೆಂಬುದನ್ನು ನಾನು ಸ್ವಾಗತಿಸುತ್ತೇನೆ. ಇದರ ಮೇಲೆ ಮಾನ್ಯ ಚಂದ್ರೇಗೌಡರು, ನಂಜುಂಡಸ್ವಾಮಿಯವರು ಹಾಗೂ ಯಡಿಯೂರಪ್ಪನವರು ಏನು ವ್ಯಾಖ್ಯಾನ ಮಾಡಿದ್ದಾರೆ ನಾವು ಇಂತಹ ಅನಿಸಿಕೆಯನ್ನು ಅವತ್ತು

ಎರಡೂವರೆ ಸಾವಿರ ಪರಿಮಿತಿ ಏನಿತ್ತು ಅದನ್ನು 10 ಸಾವಿರಕ್ಕೆ ಏರಿಸುವಾಗ ಮಾಡಿದ್ದರೆ ಬಹಳ ಚೆನ್ನಾಗಿತ್ತು. ಅವತ್ತು ಎಲ್ಲರೂ 10 ಸಾವಿರ ರೂಪಾಯಿಗಳನ್ನು ಕೊಡಬೇಕು ಎನ್ನುವುದನ್ನು ಸ್ವಾಗತ ಮಾಡಿ ಇವತ್ತು ಅದನ್ನು ಡ್ರಾ ಮಾಡಬೇಕೆನ್ನುವಾಗ ಇದ್ದ ಪ್ರೊಸೀಜರನ್ನು ಸಿಂಪ್ಲಿಫೈ ಮಾಡುವಾಗ ವಿರೋಧಿಸುವುದು ಸರಿಯಲ್ಲ. ಎಷ್ಟೋ ಜನ ಶಾಸಕರು ಪ್ಲೇನ್‌ನಲ್ಲಿ ಟ್ರಾವಲ್ ಮಾಡುತ್ತಾರೆ. ಟಿಕೆಟನ್ನು ಅವರ ಬಳಿ ಇಟ್ಟುಕೊಂಡು ಅಕೌಂಟ್ ಸೆಕ್ಷನ್‌ಗೆ ಕೊಡುವುದು ಬಹಳ ಕಷ್ಟವಾಗಿರುತ್ತದೆ. ಈ ದೃಷ್ಟಿಯಿಂದ ಈ ಮಸೂದೆ ತಂದಿರುವುದನ್ನು ಎಲ್ಲರೂ ಸ್ವಾಗತಿಸಬೇಕೆಂದು ನಾನು ಪ್ರಾರ್ಥನೆಮಾಡುತ್ತೇನೆ.

+ ಶ್ರೀ ಬಿ. ಹೆಚ್. ಬನ್ನಿಕೋಡ್: (ಹಿರೇಕೆರೂರ್):- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಕಲ್ಯಾಣಕ್ಕಾಗಿ ಒಂದು ನಿಧಿ ಮಾಡಬೇಕೆಂದು ಏನು ಮಾಡಿದ್ದಾರೆ, ಈ ಮನೆಯಲ್ಲಿ ಸಲಹೆ ಬಂದ ಪ್ರಕಾರ ಸರ್ಕಾರ ಈ ಬಿಲ್ ತಂದಿದೆ. ಹೀಗಾಗಿ ಎಲ್ಲರೂ ಸ್ವಾಗತಿಸುತ್ತಾರೆ. ಇದರಲ್ಲಿ ಯಾರದೂ ಭಿನ್ನಾಭಿಪ್ರಾಯವಿಲ್ಲ. ಆದರೆ ಈ 10 ಸಾವಿರ ರೂಪಾಯಿಗಳನ್ನು ಸಚಿವರಿಗೆ ಅಥವಾ ಸದಸ್ಯರಿಗೆ ವರ್ಷಕ್ಕೆ ಎರಡು ಕಂತಿನಲ್ಲಿ 5-5 ಸಾವಿರ ರೂಪಾಯಿಗಳಂತೆ ಕೊಡುವ ವ್ಯವಸ್ಥೆ ಮಾಡಿದ್ದಾರೆ. ಮೊದಲು ಕೂಪನ್‌ಗಳನ್ನು ಕೊಡುತ್ತಾ ಇದ್ದರು. ಪ್ರವಾಸ ಮಾಡಾವಾಗ ಆ ಕೂಪನ್‌ಗಳನ್ನು ಕೊಟ್ಟು ಪ್ರವಾಸ ಮಾಡುತ್ತಿದ್ದೆವು ಮೊದಲು

( 4.20. ಪಿ. ಎಂ.)

5 ಸಾವಿರ ಇತ್ತು ನಂತರ 10 ಸಾವಿರ ರೂಪಾಯಿ ಮಾಡಿದರು. ಆದರೆ ಈಗ ಅದನ್ನು ಎರಡು ಕಂತುಗಳಲ್ಲಿ ಕೊಡುವಂಥ ಒಂದು ವಿಚಾರ ಈ ಬಿಲ್ಲಿನಲ್ಲಿ ಆಡಗಿದೆ. ಅದರಲ್ಲೂ 90ನೇ ಇಸವಿಯಿಂದ ಇಲ್ಲಿಯವರೆಗೆ ಏನು ವ್ಯವಸ್ಥೆ ಇತ್ತು? ಆಗ ಏನು ವ್ಯವಸ್ಥೆ ಇತ್ತು ಎಂದರೆ, ರೈಲ್ವೆ ಕೂಪನ್‌ಗಳನ್ನು ಕೊಡುತ್ತಿದ್ದರು. ನಾವು ಪ್ರವಾಸ ಮಾಡುವಾಗ ಕೂಪನ್‌ಗಳನ್ನು ಕೊಟ್ಟು ಉಪಯೋಗ ಮಾಡಿಕೊಂಡು ಪ್ರವಾಸ ಮಾಡುತ್ತಿದ್ದೆವು. ಆ ನಂತರ ಏನು ಮಾಡಿದರು ಎಂದರೆ ಹತ್ತು ಸಾವಿರ ರೂಪಾಯಿಗಳನ್ನು ಖಾತೆಯಲ್ಲಿ ಜಮಾ ಇಡುತ್ತಿದ್ದರು. ನಾವು ಹಣವನ್ನು ಕೊಟ್ಟು ಪ್ರವಾಸ ಮಾಡಿ ಬಂದು ಕ್ಲೈಂ ಮಾಡುತ್ತಿದ್ದೆವು. ಅದು ಸಾವಿರ, ಎರಡು ಸಾವಿರ, ಹತ್ತು ಸಾವಿರವೋ ಆಗಬಹುದು. ಈಗಾಗಲೇ ಆ ಪ್ರಕಾರ90ನೇ ಇಸವಿಯಿಂದ ಇಲ್ಲಿಯವರೆಗೆ ಇದ್ದಂಥ ವ್ಯವಸ್ಥೆಯಲ್ಲಿ ಕೂಪನ್ ಕೊಟ್ಟಾಗಲೀ ಅಥವಾ ನಾವೇ ಹಣ ಕೊಟ್ಟು ಅದನ್ನು ಕ್ಲೈಮ್ ಮಾಡಿಬಿಟ್ಟಿದ್ದೇವೆ. ಈಗ ಅದನ್ನು ರೀ ಎಂಬರ್ಸ್ ಮಾಡತಕ್ಕಂಥ ಅವಶ್ಯಕತೆ ಎಲ್ಲಿದೆ ? ಹೀಗೆ ಯಾವುದೇ ರೀತಿಯ ಒಂದು ಸಕಾರಣ ಇಲ್ಲದೆ, ಯಾವುದೇ ರೀತಿಯ ಸತ್ಯ ಇಲ್ಲದೆ ಈ ರೀತಿ ಎರಡು ವರ್ಷಗಳ ಹಿಂದಿನಿಂದ ಬಾಕಿ ಕೊಡತಕ್ಕಂಥದ್ದು ಸರಿಯಲ್ಲ. ಸರ್ಕಾರ ಆ ಸವಲತ್ತನ್ನು ಕೊಟ್ಟಿದೆ. ಕೂಪನ್‌ಗಳನ್ನು ಬಳಸಿದ್ದೇವೆ. ಪ್ರವಾಸ ಮಾಡಿದ್ದೇವೆ. ಅಲ್ಲಿ ನಾವು ಕೈಯಿಂದ ಕೊಟ್ಟಿಲ್ಲ. ಹಣವನ್ನು ಈಗ ಇರುವ ಕಾನೂನು ಪ್ರಕಾರ ಸಹಿತ ಕೊಟ್ಟಿದ್ದೇವೆ, ಮತ್ತು ಅದನ್ನು ಕ್ಲೈಮ್ ಮಾಡಿದ್ದೇವೆ. ಈಗ ಅಲ್ಲಿಂದ ಪುನ: ಬಾಕಿ ಕೊಡಬೇಕು ಎನ್ನತಕ್ಕಂಥ ವಿಚಾರ ಏನು ಇದೆ, ಇದಂತೂ ಸರಿಯಿಲ್ಲ. ಇನ್ನು ಮುಂದೆ ಹತ್ತು ಸಾವಿರ ರೂಪಾಯಿ ಬಹಳ ಆಗುತ್ತದೆ ಎಂದು ಕೆಲವರು ಹೇಳಬಹುದು. ಇನ್ನು ಕೆಲವರಿಗೆ ಅದು ಬಹಳ ಆಗಲಿಕ್ಕಿಲ್ಲ. ಅನೇಕ ಸಾರಿ ಪ್ರವಾಸ ಮಾಡುವುದಕ್ಕೆ ಹತ್ತು ಸಾವಿರ ರೂಪಾಯಿ ಏನೂ ಬಹಳ ಅಲ್ಲ. ಆದರೆ ಪ್ರವಾಸ ಮಾಡಿದಾಗ ಇಲ್ಲಿ ಯಾವುದೇ ಒಂದು ನಿರ್ಭಂಧ ಇಲ್ಲ. ಪ್ರವಾಸ ಮಾಡಿದಾಗ ಮಾತ್ರ ಇದನ್ನು ನಾವು ಬಳಸತಕ್ಕಂಥದ್ದು, ಇದಕ್ಕೆ ಸೀಮಿತವಾಗಿರಬೇಕು ಎನ್ನತಕ್ಕಂಥ ನಿರ್ಬಂಧ ಇಲ್ಲ. ಅನೇಕರು ಪ್ರವಾಸ ಮಾಡಲಿಕ್ಕಿಲ್ಲ,

ಬಸ್ ಪಾಸ್ ಇದೆ. ಬಸ್‌ನಲ್ಲಿ ಓಡಾಡುವುದಕ್ಕೆ ನಾವು ಹಣವನ್ನು ಕೊಡಬೇಕಾಗಿಲ್ಲ. ಕರ್ನಾಟಕದಲ್ಲಿ ಎಲ್ಲಿಯಾದರೂ ನಾವು ಪಾಸಿನಲ್ಲಿ ಓಡಾಡಬಹುದು. ಆದರೆ ಈ ಹಣವನ್ನು ಬಳಸದೇ ಇರತಕ್ಕಂಥವರಿಗೆ ಕೊಡತಕ್ಕಂಥದ್ದು ಸರ್ಕಾರದ ಸದುದ್ದೇಶವೇ ಎನ್ನತಕ್ಕಂಥ ಪ್ರಶ್ನೆ ಇಲ್ಲಿ ಉದ್ಭವವಾಗುತ್ತದೆ. ಅದಕ್ಕಾಗಿ ನಾನು ಹೇಳುತ್ತಿರುವುದು ಏನೆಂದರೆ, ಮೊದಲಿನಂತೆ ಕೂಪನ್ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿ. ಇಲ್ಲದಿದ್ದರೆ ಅವರು ಪ್ರಯಾಣ ಮಾಡಿದ ನಂತರ ಆ ಹಣವನ್ನು ಕೊಡತಕ್ಕಂಥ ವ್ಯವಸ್ಥೆಯಾಗಬೇಕು. ಪ್ರಯಾಣ ಮಾಡದೇ ಇದ್ದರೂ ಸಹಿತ ಹಣ ಕೊಡತಕ್ಕಂಥ ವ್ಯವಸ್ಥೆ ಏನಿದೆ ಇದು ಸರಿಯಲ್ಲ ಎಂದು ನಾನು ಇದನ್ನು ವಿರೋಧ ಮಾಡುತ್ತಿದ್ದೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ: ( ಕಾನೂನು ಸಚಿವರು):- ಮಾನ್ಯ ಅಧ್ಯಕ್ಷರೇ, ಇದರ ವಿಷಯ ಬಹಳಷ್ಟು ಚರ್ಚೆಯಾಗಿದೆ. ಆದರೆ ನನಗನ್ನಿಸಿದ್ದು ಏನೆಂದರೆ, ನಮ್ಮ ಶಾಸಕರಿಗೆ ಆದಷ್ಟು ನಾವು ಸವಲತ್ತುಗಳನ್ನು ಕೊಡಬೇಕು. ನಾವು ಸವಲತ್ತುಗಳನ್ನು ಕೊಡುವುದು ಕಡಿಮೆಯಾಗುತ್ತಿದೆ ಎಂದು ನನ್ನ ಅಭಿಪ್ರಾಯ. ಏಕೆಂದರೆ, ಅವರು ಸಾರ್ವಜನಿಕರ ಕೆಲಸವನ್ನು ಮಾಡುವವರು. ಇಡೀ ವರ್ಷ, ಬೇರೆ ಯಾವುದೇ ಕೆಲಸವನ್ನು ಅವರಿಗೆ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕಾಗಿ ಅವರಿಗೆ ಈ ಹತ್ತು ಸಾವಿರ ರೂಪಾಯಿಗಳನ್ನು ಹಿಂದಿನಿಂದ ನಾವು ಕೊಟ್ಟು ಕೊಂಡು ಬಂದಿದ್ದೇವೆ. ಮುಂಚೆ ಟ್ರೈನ್ ಕೂಪನ್ಸ್ ಕೊಟ್ಟಿದ್ದೇವೆ. ಪ್ಲೈನ್‌ನಲ್ಲಿ ಹೋದರೆ ಆ ಟಿಕೆಟ್ಟನ್ನು ಕೊಟ್ಟರೆ ಅದನ್ನು ರೀಇಂಬರ್ಸ್ ಮಾಡಿದ್ದಾರೆ. ಹೆಚ್ಚಿಗೆ ಹೇಳಬೇಕಾದರೆ ಎಲ್ಲರೂ ಈ ಹತ್ತು ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಅದೇ ರೀತಿಯಲ್ಲಿ ಉತ್ತರ ಪ್ರದೇಶದಲ್ಲಿ ನೋಡಿದರೆ ಅಲ್ಲಿ 25 ಸಾವಿರ ರೂಪಾಯಿಗಳ ರೈಲ್ವೆ ಕೂಪನ್ಸ್ ಕೊಡುತ್ತಾರೆ. ಈಗ ಅಲ್ಲಿ ಇನ್ನೂ ಹೆಚ್ಚಿಗೆ ಕೊಡುತ್ತಿರಬಹುದು. ಇದು ಎರಡು ವರ್ಷಗಳ ಮುಂಚಿನದು. ನಮ್ಮ ಆಂಧ್ರದಲ್ಲಿ . . . .

ಶ್ರೀ ಬಿ. ಹೆಚ್. ಬನ್ನಿಕೋಡ್:- ಹೆಚ್ಚಿಗೆ ಮಾಡಿದರೆ ನಮ್ಮ ಅಭ್ಯಂತರವಿಲ್ಲ. ಎಲ್ಲರನ್ನೂ ಸಾಮಾನ್ಯ ಎಂದು ಮಾಡುವುದು ಸರಿಯಲ್ಲ.

ಶ್ರೀ ಬ್ಲೇಸಿಯಸ್. ಎಂ. ಡಿ. ಸೌಜ:- ನಮ್ಮ ಆಂಧ್ರದಲ್ಲಿ ಒಬ್ಬೊಬ್ಬರಿಗೆ ಹತ್ತು ಸಾವಿರ ರೂಪಾಯಿಗಳ ಸ್ಯಾಲರಿ ಮತ್ತು ಅಲೋಯೆನ್ಸ್ ಸಿಗುತ್ತದೆ. ಅದೇ ರೀತಿಯಲ್ಲಿ ನಾನು ಹೇಳಬೇಕಾಗಿದ್ದರೆ ನಮ್ಮ ಶಾಸಕರ ಮೇಲೆ ನಮಗೆ ನಂಬಿಕೆ ಉಂಟು. ಅವರು ಕೂಪನ್ಸ್‌ನ್ನು ತೆಗೆದುಕೊಳ್ಳಬೇಕು ಎಂದು ಇಲ್ಲ, ಅವರು ಪ್ಲೈನ್ ಟಿಕೆಟ್ ತರಬೇಕು ಎಂದು ಇಲ್ಲ. ಏಕೆಂದರೆ ಎಲ್ಲಾ ಸುಲಭವಾಗುವುದಕ್ಕೆ ಇದನ್ನು ನಾವು companionsಅಂದರೆ ಒಬ್ಬರೇ ಹೋಗುವುದಿಲ್ಲ, ಇಬ್ಬರು ಹೋದರೂ ಸಹ ಅವರಿಗೆ ಈ ಸವಲತ್ತು ಸಿಗುತ್ತದೆ. ಅದಕ್ಕೆ ನಾನು ಹೇಳಬೇಕಾದರೆ, ಕೆಲವರಲ್ಲಿ ತಪ್ಪು ಅಭಿಪ್ರಾಯ ಇದೆ. ಇದರಿಂದ ಸ್ಪೇಟ್ ಎಕ್ಸ್‌ಚೆಕರ್‌ಗೆ ಹೆಚ್ಚು ಖರ್ಚೇನೂ ಆಗುವುದಿಲ್ಲ. ಆದುದರಿಂದ ಹತ್ತು ಸಾವಿರ ರೂಪಾಯಿಗಳನ್ನು ಎರಡು ಕಂತುಗಳಲ್ಲಿ ಕೊಡುವುದನ್ನು ಸ್ಯಾಂಕ್ಷನ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದರೊಟ್ಟಿಗೆ ಅಮೆಂಡ್‌ಮೆಂಟ್ ನಂ.2 ನ್ನು ನೋಡಿದರೆ The amount is payable subject to such rules as may be prescribed. ಅದೇ ರೀತಿಯಲ್ಲಿ ನಾವು ರೂಲ್ಸ್ ಮಾಡುವಾಗ ಕೆಲವು ಕಂಡೀಷನ್ಸ್ ಹಾಕಬಹುದು. This is regarding establishment of Benevolent Fund. ಇದನ್ನು ನೀವೆಲ್ಲರೂ ಒಪ್ಪಿಕೊಂಡಿದ್ದೀರಿ. ಇದರಲ್ಲಿ 2 (ಎ) ಕ್ಲಾಸ್ ಇದೆ.ಅದು ಈ ರೀತಿ ಇದೆ. "Such amount as may be contributed by any member or former member of the Karnataka Legislative Assembly or Karnataka Legislative

Council." I would request all the members to contribute to the Benevolent Fund so that we may help our less fortunate legislators who have retired and who really need help for themselves and their families. ಆದುದರಿಂದ ಇದಕ್ಕೆ ಅನುಮೋದನೆ ಕೊಡಬೇಕೆಂದು ನಾನು ನಿಮ್ಮೆಲ್ಲರಲ್ಲಿ ಕೇಳಿಕೊಳ್ಳುತ್ತೇನೆ.

ಛೇರ್ಮನ್:- ಪ್ರಸ್ತಾವ ಏನೆಂದರೆ, " 1992ನೇ ಸಾಲಿನ ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಮತ್ತು 3

ಛೇರ್ಮನ್:- ಖಂಡ 2 ಮತ್ತು 3 ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ಮತ್ತು 3ನೇ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಛೇರ್ಮನ್:- ಪ್ರಸ್ತಾವ ಏನೆಂದರೆ "ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ ."

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : (ಕಾನೂನು ಸಚಿವರು):- ಮಾನ್ಯ ಅಧ್ಯಕ್ಷರೇ, 1992ನೇ ಸಾಲಿನ ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಛೇರ್ಮನ್:- ಪ್ರಸ್ತಾವ ಏನೆಂದರೆ : "1992ನೇ ಸಾಲಿನ ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ(ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು)

5. The Karnataka Motor Vehicles Taxation Amendment Bill 1992

MOTION TO CONSIDER

+ Sri. AZEEZ SAIT (Transport Minister):- Speaker sir, I request that the Karnataka Motor Vehicles Taxation Amendment Bill 1992 may be taken into consideration."

Question was proposed.